ದಿನಾಂಕಃ 17-09-2025 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಆರೋಪಿತರ ಪರವಾಗಿ ಪಾಟೀ ಸವಾಲುಃ ಶ್ರೀ ಎಂ.ಎಸ್.ಎಸ್. ವಕೀಲರಿಂದ:**

1. ದಿನಾಂಕ 07-07-2020 ರಂದು ನಾನು ಮುಂದಿನ ತನಿಖೆಯನ್ನು ಕೈಗೆತ್ತಿ ಕೊಂಡಿರುತ್ತೇನೆ, ಆದರೆ ಸಮಯ ನೆನಪಿಲ್ಲ. ಘಟನೆಯ ಬಗ್ಗೆ ಪಿ.ಎಸ್.ಐ. ರವರು ರಾತ್ರಿ 11-45 ಕ್ಕೆ ನನಗೆ ಪೋನ್ ಮಾಡಿ ಯೋಗೀಶ್ ಎಂಬುವರಿಗೆ ಯಾರೋ ಹಲ್ಲೆ ನಡೆಸಿದ್ದಾರೆ ಅವರನ್ನು ಚಿಕಿತ್ಸೆಗಾಗಿ ಮಣಿಪಾಲ ಕೆಎಂಸಿ ಆಸ್ಪತ್ರೆಗೆ ಕೊಂಡು ಹೋಗಿರುತ್ತಾರೆ, ಅವರ ಸ್ಥಿತಿ ಗಂಭೀರವಾಗಿದೆ ಎಂದು ತಿಳಿಸಿರುತ್ತಾರೆ. ಪಿ.ಎಸ್.ಐ. ರವರು ನನಗೆ ದಿನಾಂಕ 06-07-2020 ರಂದು ರಾತ್ರಿ ಕರೆ ಮಾಡಿರುತ್ತಾರೆ. ನನಗೆ ಮಾಹಿತಿ ಬಂದ ತಕ್ಷಣ ನಾನು ಮೊದಲು ತಕ್ಷೀರು ಸ್ಥಳಕ್ಕೆ ಹೋಗಿರುತ್ತೇನೆ. ನಾನು ಸ್ಥಳಕ್ಕೆ ಹೋದಾಗ ರಾತ್ರಿ 12-30 ರಿಂದ 1-00 ಗಂಟೆಯಾಗಿತ್ತು. ಆಗ ಸ್ಥಳದಲ್ಲಿ ಸ್ವಲ್ಪ ಜನ ಇದ್ದರು, ಆದರೆ ಎಷ್ಟು ಜನ ಎಂದು ಹೇಳಲು ಆಗುವುದಿಲ್ಲ. ಸ್ಥಳದಲ್ಲಿ ಬೈಕ್ ಮತ್ತು ರಕ್ತ ಬಿದ್ದಿತ್ತು, ಸದ್ರಿ ಸ್ಥಳವನ್ನು ನಾನು ರಕ್ಷಣೆ ಮಾಡಿರುತ್ತೇನೆ. ಸ್ಥಳದಲ್ಲಿದ್ದವರನ್ನು ಘಟನೆಯ ಬಗ್ಗೆ ವಿಚಾರಿಸಿರಬಹುದು, ಆದರೆ ಈಗ ನೆನಪಿಲ್ಲ. ನಾನು ಬೆಳಗ್ಗಿನ ಜಾವ ಅಂದರೆ 07-07-2020 ರಂದು 3-30 ರ ವರೆಗೆ ಇದ್ದೆ. ಆ ಸಮಯದಲ್ಲಿ ನಾನು ಮೃತರ ಮನೆಯವರ ಜೊತೆ ಮಾತನಾಡಿ ಮಾಹಿತಿಯನ್ನು ಕಲೆ ಹಾಕುತ್ತಿದ್ದೆ. ಆ ಸಮಯದಲ್ಲಿ ಹೇಳಿಕೆಯನ್ನು ಪಡೆದುಕೊಂಡಿಲ್ಲ. ನಾನು ಸ್ಥಳಕ್ಕೆ ಹೋದಾಗ ಚಾಸಾ1 ಸ್ಥಳದಲ್ಲಿ ಇದ್ದರೋ, ಇಲ್ಲವೋ ನೆನಪಿಲ್ಲ. ಪ್ರಕರಣದ ಕಡತ ನನ್ನ ಕೈಗೆ ಬೆಳಿಗ್ಗಿನ ಜಾವ 3-30 ಕ್ಕೆ ಬಂದಿರುತ್ತದೆ. ಆಗ ನನಗೆ ಪ್ರಕರಣದಲ್ಲಿ ದೂರುದಾರ ಯಾರು ಎಂದು ಗೊತ್ತಾಯಿತು. ಕಡತ ನನ್ನ ಕೈಗೆ ಬಂದ ನಂತರದಲ್ಲಿ ಚಾಸಾ1 ಸ್ಥಳಕ್ಕೆ ಬಂದಿರುತ್ತಾರೆ. ಆತ ಸ್ಥಳಕ್ಕೆ ಬಂದಾಗ ಆತನ ಹೇಳಿಕೆ ಪಡೆದಿಲ್ಲ, ಆದರೆ ನೋಟೀಸ್ ಕೊಟ್ಟಿರುತ್ತೇನೆ. ಚಾಸಾ1 ರವರನ್ನು ದೂರಿನಲ್ಲಿರುವ ಅಂಶ ಸತ್ಯ ಇರುವ ಬಗ್ಗೆ ವಿಚಾರಿಸಿರುತ್ತೇನೆ, ಆಗ ಸಮಯ ಬೆಳಗ್ಗಿನ ಜಾವ 3-30 ರಿಂದ 4-45 ಗಂಟೆ ಆಗಿರಬಹುದು. ಈ ವಿಚಾರವನ್ನು ಹೇಳಿಕೆಯ ರೂಪದಲ್ಲಿ ಪಡೆದುಕೊಂಡಿಲ್ಲ, ಅದರ ಬಗ್ಗೆ ಬೇರೆ ದಾಖಲೆ ಇಲ್ಲ.

2. ಚಾಸಾ1 ರವರ ಹೇಳಿಕೆಯನ್ನು ಎಷ್ಟು ಗಂಟೆಯ ಸಮಯದಲ್ಲಿ ಪಡೆದುಕೊಂಡಿರುತ್ತೇನೆ ನೆನಪಿಲ್ಲ. ತಕ್ಷೀರು ಸ್ಥಳವನ್ನು ಯೋಗೀಶ್ ಮನೆಯವರು ತೋರಿಸಿರುತ್ತಾರೆ, ಆದರೆ ಅವರು ಯಾರು ಎಂದು ಗೊತ್ತಿಲ್ಲ. ಮೃತ ಯೋಗೀಶ್ ನ ಮನೆಯ ಅಕ್ಕಪಕ್ಕ ವಾಸದ ಮನೆಗಳು ಇವೆ. ಚಾಸಾ6 ರವರ ಮನೆ ನಾನು ಹೇಳುವ ತಕ್ಷೀರು ಸ್ಥಳದಿಂದ ಎಷ್ಟು ದೂರದಲ್ಲಿದೆ ಹೇಳಲು ಆಗುವುದಿಲ್ಲ. ಪ್ರತ್ಯಕ್ಷ ಸಾಕ್ಷಿಗಳನ್ನು ಈ ಪ್ರಕರಣದಲ್ಲಿ ನಾವು ಸೃಷ್ಟಿ ಮಾಡಿದ್ದೇವೆ ಎಂದರೆ ಸರಿಯಲ್ಲ. ಯಾವುದೇ ಸಾಕ್ಷಿದಾರರ ಹೇಳಿಕೆಗಳನ್ನು ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ. ಆರೋಪಿತರು ಯಾವುದೇ ಸ್ಥಳವನ್ನು ನಮಗೆ ತೋರಿಸಿಲ್ಲ ಎಂದರೆ ಸರಿಯಲ್ಲ. ಆರೋಪಿತರು ಯಾವುದೇ ಸ್ವಇಚ್ಛಾ ಹೇಳಿಕೆಗಳನ್ನು ಕೊಟ್ಟಿಲ್ಲ ಮತ್ತು ಆ ಪ್ರಕಾರ ಯಾವುದೇ ವಸ್ತುಗಳನ್ನು ಅಮಾನತ್ತುಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ನಾನು ಹೇಳಿದ ರೀತಿ ಆರೋಪಿತರನ್ನು ದಸ್ತಗಿರಿ ಮಾಡಿಲ್ಲ ಎಂದರೆ ಸರಿಯಲ್ಲ. ಆರೋಪಿತರಿಗೂ ಮತ್ತು ಈ ತಕ್ಷೀರಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ತನಿಖೆಯ ಪ್ರಕಾರ ಆರೋಪಿತರು ಮತ್ತು ಮೃತನಿಗೆ ಯಾವುದೇ ವೈಷಮ್ಯ ಇರಲಿಲ್ಲ ಎಂದರೆ ಸರಿಯಲ್ಲ. ಪಂಚನಾಮೆಗಳನ್ನು ಠಾಣೆಯಲ್ಲಿ ಸೃಷ್ಟಿ ಮಾಡಿದ್ದೇವೆ ಎಂದರೆ ಸರಿಯಲ್ಲ. ಅಮಾಯಕರ ಮೇಲೆ ಸುಳ್ಳು ಪ್ರಕರಣ ದಾಖಲು ಮಾಡಿದ್ದೇನೆ ಎಂದರೆ ಸರಿಯಲ್ಲ. ಸಂಚು ರೂಪಿಸಿದ ಸ್ಥಳವನ್ನು ಆರೋಪಿತರು ತೋರಿಸಿದ್ದಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಉಳಿದ ಆರೋಪಿತರ ಪರ ವಕೀಲರು ಮೇಲಿನ ಪಾಟಿ ಸವಾಲನ್ನು ಅಳವಡಿಸಿಕೊಂಡಿರುತ್ತಾರೆ.**

**<u>ಮರು ವಿಚಾರಣೆಃ ಇಲ್ಲ</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದರು.

ಎರಡನೇಯ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉಡುಪಿ.